ಅಲ್ಲಿಯೇ ಲಭ್ಯವಿರುವ ಅಂಗಾಂಶಗಳಲ್ಲಿ ಹರಳುಗಟ್ಟಲು ಪ್ರಾರಂಭಿಸುತ್ತದೆ. ಹೀಗೆ ಹರಳುಗಟ್ಟಿದ ಯುರಿಕ್ ಆಮ್ಲವು ಸುತ್ತಲಿನ ಅಂಗಾಂಶಗಳಲ್ಲಿ ಉರಿಯೂತ ಪ್ರಕ್ರಿಯೆಗೆ ಕಾರಣವಾಗುತ್ತದೆ. ಆಗ ವ್ಯಕ್ತಿಯು ಕೀಲುಗಳ ಉರಿಯೂತದ ಸಮಸ್ಯೆಯಿಂದ ಬಳಲುತ್ತಾನೆ.

### ಶರೀರದಲ್ಲಿ ಯುರಿಕ್ ಆಮ್ಲವು ಹೆಚ್ಚಾಗಲು ಕಾರಣಗಳೇನು?

- ಶರೀರದಲ್ಲಿ ಯುರಿಕ್ ಆಮ್ಲದ ಉತ್ಪತ್ತಿಗೆ ಕಾರಣವಾಗುವ ಕಿಣ್ವಗಳು ಹೆಚ್ಚಿನ ಪ್ರಮಾಣದಲ್ಲಿದ್ದಾಗ ಅಥವಾ ವಿಪರೀತ ಚಟುವಟಿಕೆ ತೋರಿದಾಗ..
- ಯುರಿಕ್ ಆಮ್ಲದ ಉತ್ಪಾದನಾ ಕ್ರಿಯೆಯನ್ನು ನಿಯಂತ್ರಿಸುವ ಕಿಣ್ವಗಳ ಕೊರತೆ ಇದ್ದಾಗ. (ಕಿಣ್ವಗಳ ಪ್ರಮಾಣ ಅಥವಾ ಕಾರ್ಯಕ್ಷಮತೆಯಲ್ಲಿನ ವ್ಯತ್ಯಾಸಗಳು ಸಾಮಾನ್ಯವಾಗಿ ಅನುವಂಶಿಕ ಕಾರಣಗಳಿಂದ ಅಥವಾ ವರ್ಣ ತಂತುಗಳ ದೋಷವಿರುವವರಲ್ಲಿ ಕಂಡುಬರುತ್ತದೆ.)
- ಯುರಿಕ್ ಆಮ್ಲವನ್ನು ಶರೀರದಿಂದ ಹೊರಹಾಕಲ್ಪಡುವ ಕ್ರಿಯೆಯಲ್ಲಿ ತೊಡಕು ಉಂಟಾದಾಗ.. ಉದಾಹರಣೆಗೆ ಮೂತ್ರಪಿಂಡಗಳ ವೈಫಲ್ಯ.. ಕೆಲವು ಔಷಧಗಳ ಸೇವನೆಯಿಂದ ಉತ್ಪತ್ತಿಗೊಂಡ ವಸ್ತುಗಳು ಯುರಿಕ್ ಆಮ್ಲದ ವಿಸರ್ಜನೆಗೆ ತೊಡಕು ಉಂಟು ಮಾಡಿದಾಗ.
- ಶರೀರದಲ್ಲಿ ಜೀವಕೋಶಗಳ ಸಂಖ್ಯೆ ಅತಿ ಹೆಚ್ಚಾದಾಗ.. ಉದಾಹರಣೆಗೆ ರಕ್ತದ ಕ್ಯಾನ್ಸರ್ ಹಾಗೂ ಅತಿ ವೇಗವಾಗಿ ಬೆಳೆಯುವ ಇನ್ನು ಕೆಲವು ಬಗೆಯ ಕ್ಯಾನ್ಸರ್‌ಗಳಲ್ಲಿ..

### ಗುಣಲಕ್ಷಣಗಳೇನು?

ದೇಹದ ಸಣ್ಣ ಕೀಲುಗಳ ಊತ ಹಾಗೂ ನೋವು. ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವ ಈ ಕೀಲುಗಳ ಉರಿಯೂತದಲ್ಲಿ ಕೀಲುಗಳ ಸುತ್ತಲೂ ಊತ, ವಿಪರೀತ ನೋವು, ಕೆಂಪಾಗುವಿಕೆ ಮತ್ತು ಆ ಭಾಗವು ಬೆಚ್ಚಗಾಗುವುದು. ಸಾಮಾನ್ಯವಾಗಿ ಶೇಕಡಾ 50ಕ್ಕಿಂತಲೂ ಹೆಚ್ಚು ಜನರಲ್ಲಿ ಕಾಲುಗಳ ಮೊದಲ ಬೆರಳಿನ ಕೀಲುಗಳಲ್ಲಿ ಈ ಉರಿಯೂತ ಕಾಣಿಸಿಕೊಳ್ಳುತ್ತದೆ. ಇನ್ನು ಕೆಲವರಲ್ಲಿ ಕಣಕಾಲು, ಹಿಮ್ಮಡಿ, ಕಣಕೈ, ಕೈ ಬೆರಳುಗಳ ಕೀಲುಗಳು ಹಾಗೂ ಮೊಣ ಕೈ ಕೂಡ ಈ ಸಮಸ್ಯೆಗೆ ಒಳಗಾಗಬಹುದು.

ಈ ಬಗೆಯ ಉರಿಯೂತವು ಹಲವು ದಿನಗಳಿಂದ ಒಂದು ವಾರದ ವರೆಗೂ ವ್ಯಕ್ತಿಯನ್ನು ಕಾಡಬಹುದು. ಒಮ್ಮೊಮ್ಮೆ ಚಿಕಿತ್ಸೆ ಮಾಡದೇ ಹೋದರೂ ಉರಿಯೂತವು ತನ್ನಿಂದ ತಾನೆ ಕಡಿಮೆಯಾಗ ಬಹುದು. ಆದರೆ ಗೌಟ್ ಸಮಸ್ಯೆ ಇರುವ ವ್ಯಕ್ತಿಗಳಲ್ಲಿ ಹಲವು ತಿಂಗಳುಗಳ ಅಥವಾ ಹಲವು ವರ್ಷಗಳ ಬಳಿಕ ಈ ರೀತಿಯ ಉರಿಯೂತವು ಮತ್ತೆ ಪುನಃ ಮರುಕಳಿಸುವುದು ಸಹಜ. ನಿರ್ದಿಷ್ಟ ಚಿಕಿತ್ಸೆಯನ್ನು ಪಡೆಯದೇ ಇದ್ದಾಗ ಅತಿ ಕಡಿಮೆ ಅವಧಿಯ ಅಂತರದಲ್ಲಿಯೇ ಈ ಉರಿಯೂತವು ಮತ್ತೆ ಮತ್ತೆ ಮರುಕಳಿಸುತ್ತಾ ಹೋಗುತ್ತದೆ.

ಈ ರೀತಿ ಪುನಃ ಪುನಃ ಉರಿಯೂತಕ್ಕೆ ಒಳಗಾದ ಕೀಲುಗಳ ಸುತ್ತಲಿನ ಅಂಗಾಂಶಗಳಿಗೆ ಶಾಶ್ವತವಾಗಿ ಹಾನಿಯಾಗಿ ವ್ಯಕ್ತಿಯು ದೀರ್ಘಕಾಲದ ಕೀಲು ನೋವಿನ ಸಮಸ್ಯೆಯಿಂದ ಬಳಲುವಂತಾಗುತ್ತದೆ. ಒಮ್ಮೊಮ್ಮೆ ಇದು ತೀವ್ರ ಸ್ವರೂಪಕ್ಕೆ ತಿರುಗಿದಾಗ ವ್ಯಕ್ತಿಯು ದೈನಂದಿನ ಚಟುವಟಿಕೆಗಳನ್ನು ನಡೆಸಲೂ ತೊಂದರೆ ಪಡುವಂತಾಗಬಹುದು.

ಗೌಟ್ ಸಮಸ್ಯೆಯಿಂದ ಬಳಲುವ ಕೆಲ ವ್ಯಕ್ತಿಗಳು ಮೂತ್ರಪಿಂಡಗಳ ಕಲ್ಲುಗಳಂತಹ ಸಮಸ್ಯೆಯಿಂದಲೂ ಬಳಲ ಬಹುದು.

### ನಿರ್ಲಕ್ಷ್ಯ ಬೇಡ

ಗೌಟ್ ಕಾಯಿಲೆಯ ಗುಣಲಕ್ಷಣಗಳು ಕಂಡ ಕೂಡಲೇ ಹತ್ತಿರದ ಮೂಳೆ ಹಾಗೂ ಕೀಲು ರೋಗ ತಜ್ಞರ ಬಳಿ ತೆರಳಿ ಸೂಕ್ತ ಚಿಕಿತ್ಸೆ ಪಡೆಯಿರಿ. ವೈದ್ಯರು ಸಮಸ್ಯೆಗೆ ಒಳಗಾದ ನಿಮ್ಮ ಕೀಲಿನ ಎಕ್ಸ್‌ರೆ ಪರೀಕ್ಷೆ ಮತ್ತು ರಕ್ತದ ಪರೀಕ್ಷೆಯನ್ನು ಮಾಡಿಸಿ ಸಮಸ್ಯೆಯ ತೀವ್ರತೆಯನ್ನು ಗಮನದಲ್ಲಿರಿಸಿ ಚಿಕಿತ್ಸೆಯನ್ನು ಸೂಚಿಸುತ್ತಾರೆ. ■

ವೈದ್ಯರ ಸಂಪರ್ಕ: 9844083284



